ಶ್ರೀ ಎಚ್. ಡಿ. ದೇವೇಗೌಡ :– ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಮಿಲ್ ಮಾಲೀಕರು ಗೋಡೌನ್‌ಗಳಲ್ಲಿ ಸ್ಟಾಕ್ ಮಾಡಿರುವ ಬತ್ತ ಎಸಿದೆ ಅದನ್ನು ಹಳೆಯ ಬತ್ತಕ್ಕೆ ಹೆಚ್ಚು ರೇಟು ಇರುವುದರಿಂದ ಹಳೆಯ ಬತ್ತವನ್ನು ತೆಗೆದು ವ್ಯಾಪಾರ ಮಾಡಿಕೊಂಡು ಹೊಸ ಬತ್ತವನ್ನು ತುಂಬಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಇವೊತ್ತು ಅಲ್ಲಿಗೆ ಒಬ್ಬರು ಸ್ಪೆಷಲ್ ಆಫೀಸರನ್ನು ಕಳುಹಿಸಿ ಅಲ್ಲಿ ಸ್ಟಾಕ್ ಎಷ್ಟಿದೆ ಹಳೆಯ ಬತ್ತ ಇದೆಯೋ ಹೊಸ ಬತ್ತ ಇದೆಯೋ ಹೇಗೆ ಎಂಬುದನ್ನು ವೆರಿಫೈ ಮಾಡಿಸಿ ಈ ಸಭೆಗೆ ಒಂದು ವರದಿಯನ್ನು ಕೊಡುತ್ತೀರಾ ?

ಶ್ರೀಮತಿ ಇ. ಇ. ವಾಜ್ :– ಮಾನ್ಯ ಸದಸ್ಯರು ಈ ಬಗ್ಗೆ ಆಕ್ಷೇಪಣೆಯನ್ನು ಎತ್ತಿದ್ದಾರೆ ಆದ್ದರಿಂದ ಆ ಬಗ್ಗೆ ಕೂಡಲೇ ಅಲ್ಲಿಗೆ ಯಾರನ್ನಾದರೂ ಕಳುಹಿಸಿ ನೋಡಿಸುತ್ತೇನೆ.

ಶ್ರೀ ಕೆ. ಮಾದೇಗೌಡ :– ಸಾವಿರಾರು ಕ್ವಿಂಟಾಲ್ ಬತ್ತವನ್ನು ಇಟ್ಟಂಥಾದ್ದು ಲೆಕ್ಕದಲ್ಲಿ ಇರತಕ್ಕಂಥಾ ಪರಿಸ್ಥಿತಿಯಲ್ಲಿಲ್ಲ. ನಾನು ಮಂತ್ರಿಗಳಿಗೆ ಸವಾಲು ಹಾಕುತ್ತೇನೆ. ಈಗ ತಕ್ಷಣ ಅಲ್ಲಿಗೆ ಯಾರನ್ನಾದರೂ ಕಳುಹಿಸಿ ವೆರಿಫೈ ಮಾಡಿಸಿ ಅವರ ವಶದಲ್ಲಿ ಲೆಕ್ಕದ ಪ್ರಕಾರ ಎಷ್ಟು ಬತ್ತ ಇರಬೇಕಾಗಿತ್ತೋ ಅಷ್ಟು ಬತ್ತ ಇದೆಯೇ ಹೇಗೆ ಎಂಬುದನ್ನು ವೆರಿಫೈ ಮಾಡಿಸಿ. ನಾನು ಹೇಳಿದ್ದು ಸುಳ್ಳು ಆದರೆ ನನ್ನ ಈ ಸಭೆಯ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಡುತ್ತೇನೆ. ಆದ್ದರಿಂದ ತಾವು ತಕ್ಷಣ ಅಲ್ಲಿಗೆ ಯಾರಾದರೂ ಅಧಿಕಾರಿಯನ್ನು ಕಳುಹಿಸಿ ಅದನ್ನು ಪತ್ತೆ ಹಚ್ಚುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್ :– ಅದನ್ನು ಎನ್‌ಕ್ವೈರಿ ಮಾಡಿಸುತ್ತೇವೆ. ತಪ್ಪಿತಸ್ಥರು ಇದ್ದರೆ ಅವರಿಗೆ ಶಿಕ್ಷೆ ಮಾಡಿಸುತ್ತೇವೆ. ಆದರೆ ಮಾನ್ಯ ಸದಸ್ಯರು ರಾಜೀನಾಮೆಯನ್ನು ಕೊಡಬೇಕೆಂದು ನಾನು ಅಪೇಕ್ಷೆ ಪಡುವುದಿಲ್ಲ.

MADAM SPEAKER :– Now the question hour is over.

DEATH OF A PATIENT AT MEGAN HOSPITAL, SHIMOGA

SRI S.N. SHERANALY CHANDRASEKAR : I have sent a short notice question long ago and I have not received any reply. The matter relates to a death of a patient due gross negligence of a doctor in Megan Hospital Shimoga. It is a serious matter, Madam. It cannot enquire such a long time.

MADAM SPEAKAR : I suggest the member to ask the Government,

ಶ್ರೀ ಕೆ. ಬಿ. ಶಿವಯ್ಯ :– ಅಧ್ಯಕ್ಷರೇ, ನನ್ನ ಕಾಲ್ ಅಟೆನ್‌ಷನ್ ನೋಟೀಸಿಗೆ ಇವೊತ್ತು ಮಾನ್ಯ ಮಂತ್ರಿಗಳು ಸ್ಟೇಟ್‌ಮೆಂಟ್ ಕೊಡುತ್ತೇನೆ ಎಂದು ಹೇಳಿದ್ದರು.

ಅಧ್ಯಕ್ಷರು :– ಅದನ್ನು ೫ ಗಂಟೆಗೆ ತೆಗೆದುಕೊಳ್ಳುತ್ತೇವೆ.

QUESTION FOR ANSWERS ON THE DAY (BUT NOT TAKEN UP)

ABOLITION OF THE POST OF INSPECTING OFFICER

286 SRI K. SIDDAIAH (Santhemarahally).—

Will the Chief Minister be pleased to state :—

(*a*) whether it is a fact that the post of an Inspecting Officer in the Public Service Commission to inspect and make a report with

regard to the irregulariites commited by the appointing authorities n the mode of appointment as well as in promotions in the State Civil Services has since been abolished;

(*b*) if so, wether the Government has made alternate arrange ments in that behalf;

(*c*) whether instances of irregularities in the matter of recruitment appointment or promotions have come to the notice of Government so for;

(*d*) whether there are any rules or regulations prescribing penalty against officers responsible far irregularities ?

SRI D. DEVARAJ URS (CHIEF MINISTER).—

(*a*) Yes.

(*b*) Yes.

(*c*) Yes.

(*d*) If any Officer is found responsible for any irregularities, action has to be taken in accordance with the Classification, Control and Appeal Rules.

Missereats beating Sri H. S. Siddappa in Bangalore and Protection to the members

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).— ನಾನು ಸರ್ಕಾರಕ್ಕೆ ಕೆಲವು ಅಲ್ಪಕಾಲಾವಧಿ ಪ್ರಶ್ನೆಗಳನ್ನು ಮತ್ತು ಕಾಲ್-ಅಟೆನ್‌ಷನ್ ನೋಟೀಸ್‌ಗಳನ್ನು ಕಳಿಸಿ ಬಹಳ ದಿವಸಗಳಾದರೂ ಸಹ ಸರ್ಕಾರದಿಂದ ಇದುವರೆಗೆ ಯಾವ ಉತ್ತರವೂ ಬಂದಿಲ್ಲದಿರುವುದನ್ನು ನೋಡಿದರೆ, ಆ ಬಗ್ಗೆ ನಾನು ಅತ್ಯಂತ ಖೇದವನ್ನು ವ್ಯಕ್ತಪಡಿಸಬೇಕಾಗುತ್ತದೆ. ಸರ್ಕಾರದವರು ತಮ್ಮ ಕೈಯಲ್ಲಿರುವ ಉತ್ತರವನ್ನು ನಮಗೆ ಕೊಡಿ ಎಂದು ಕೇಳಿದರೂ ಸಹ ಕೊಡದಿರುವುದಾಗ, ನಮ್ಮ ವಿರೋಧಪಕ್ಷದ ಸದಸ್ಯರಂಗಳಿಗೆ ಜೀವ ಹಾನಿಯಾಗುವ ಸಂಭವವಿದೆ. ಮಾನಾಪಹರಣ ಮತ್ತು ಪ್ರಾಣಾಪಹರಣವಾಗುತ್ತಿದೆ. ನಮ್ಮ ವಿರೋಧ ಪಕ್ಷದ ಸದಸ್ಯರಾದ ಶ್ರೀ ಎಚ್. ಎಸ್. ಸಿದ್ದಪ್ಪನವರ ಮೇಲೆ ನಿನ್ನೆ ದಿವಸವಾದರೂ ಕೈ ಮಾಡಿದ್ದಾರೆ.

2-00 P M.

ಅಧ್ಯಕ್ಷರು.— ಎಲ್ಲೋ ಹೊಡೆದಿದ್ದಕ್ಕೆ, ಅದನ್ನು ಅಸೆಂಬ್ಲಿಯಲ್ಲಿ ಬಂದು ಹೇಳುವುದು ಸರಿಯೇ ?

ಶ್ರೀ ಕೋಣಂದೂರು ಲಿಂಗಪ್ಪ.— ರೂಲ್ 312ರ ಪ್ರಕಾರ ಆ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಈ ನಮ್ಮ ಸಭೆಯ ಸದಸ್ಯರ ಮಾನ ಮತ್ತು ಪ್ರಾಣಹಾನಿ ಆಗುವ ಸಂಭವ ಬಂದಿದೆ. ಅದೂ ಕೂಡ ವಿರೋಧ ಪಕ್ಷದ ಸದಸ್ಯರುಗಳ ಮೇಲೆ ಇಂತಹ ದಾಳಿ ಹೆಚ್ಚಾಗಿ ನಡೆಯುತ್ತಿದೆ. ಅದನ್ನು ಕಾಂಗ್ರೆಸ್ ಪಕ್ಷದವರು ಮಾಡಿಸುತ್ತಿದ್ದಾರೆ, ಸರ್ಕಾರದವರು ಮಾಡಿಸುತ್ತಿದ್ದಾರೆಂದು ಆರೋಪ ಮಾಡುವುದಕ್ಕೆ ನಾನು ತಯಾರಿಲ್ಲ. ನಮಗೆ ಗೊತ್ತಿರುವ ಪ್ರಕಾರ ಸತ್ಯದ ಸಂಗತಿಯನ್ನು ಹೇಳುತ್ತಿದ್ದೇನೆ. ನಾವುಗಳು ಯಾವುದೇ ಅಪರಾಧ ಮಾಡಿದ್ದರೂ ಸಹ ನಮ್ಮ ಮೇಲೆ ಕೈ ಮಾಡುವುದಾದರೆ ನಮ್ಮ ಪರಿಸ್ಥಿತಿಯಾದರೂ ಏನು ? ನಮಗೆ ತಿಳಿದಿರುವ ವಿಷಯಗಳನ್ನು ಇಲ್ಲಿ ವ್ಯಕ್ತಪಡಿಸುವುದಕ್ಕೆ ಸ್ವತಂತ್ರ್ಯ